ಶ್ರೀ ಪಿ. ಎಂ. ಬಂಗಿ.—(ಸಿ) ಪ್ರಶ್ನೆಗೆ ಉತ್ತರದಲ್ಲಿ ಇಲ್ಲವೆಂದು ಹೇಳಿದ್ದೀರಿ, ಬಿಜಾಪುರ ಜಿಲ್ಲೆಯಲ್ಲಿ ಕಂಟ್ರಾ ್ಯಕ್ಟರ್ಸ್ ಯಾರು ಯಾರಿದ್ದಾರೆ ಅದರ ಬಗ್ಗೆ ಮಾಹಿತಿ ಕೊಡುತ್ತೀರಾ

†ಶ್ರೀಮತಿ ಇ. ಇ ವಾಜ್.—ತಾವು ತಿಳಿದ ಹಾಗೆ ವಿಜಾಪುರ ಜಿಲ್ಲೆಯಲ್ಲಿ ಕಂಟ್ರಾ್ಯಕ್ ್ಟರ್ಸ್ ಯಾರೂ ಡಿಫಾಲ್ಟರ್ಸ್ ಇಲ್ಲ ತಾವು ಇದ್ದಾರೆ ಎಂದು ಹೇಳುವುದಾದರೆ ಅದರ ಮಾಹಿತಿ ಕೊಟ್ಟರೆ ಅದನ್ನು ಪರಿಶೀಲನೆ ಮಾಡಿಸುತ್ತೇನೆ,

ಶ್ರೀ ಪಿ. ಎಂ. ಬಂಗಿ.—ಲೆಕ್ಕಾಚಾರವೆಲ್ಲ ತಪಾಸಣೆಯಾಗಿದೆಯೇ? ಆಗಿದ್ದರೆ ಯಾವಾಗ

ಶ್ರೀಮತಿ ಇ. ಇ ವಾಜ್.—ಸಾಮಾನ್ಯವಾಗಿ ಪ್ರತಿ ವರ್ಷ ಜೂನ್ ಅಖೈರಿಗೆ ಎಲ್ಲ ಲೆಕ್ಕಾಚಾರ ಮಾಡುತ್ತಾರೆ ಕಳೆದ ವರ್ಷದ ಲೆಕ್ಕಾಚಾರ ನಮಗಿನ್ನೂ ತಿಳಿದು ಬಂದಿಲ್ಲ, ಈ ವರ್ಷದ್ದು ಬರೀವ ಎರಡು ತಿಂಗಳಲ್ಲಿ ನಮಗೆ ತಿಳಿದು ಬರುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಸಾಮಾನ್ಯವಾಗಿ ಮದ್ಯವನ್ನು ಈಚಲ ಮರಗಳಿಂದ ತಯಾರಿಸಬೇಕಾಗುತ್ತದೆ. ರಾಯಚೂರು ಬಳ್ಳಾರಿ ಪ್ರದೇಶಗಳ ಕಡೆ, ಇಂಥಾ ಈಚಲ ಮರಗಳಿಂದ ಬರುವ ಮದ್ಯದ ಉತ್ಪನ್ನ, ಕಂಟ್ರಾಕ್ಟುದಾರನು ಖರ್ಚುಮಾಡಿರುವ ಹಣದ ಶೇಕಡ ಹತ್ತು ಭಾಗ ಧಕ್ಕು ಆಗುವುದಿಲ್ಲ. ಆದುದರಿಂದ, ಅವರುಗಳು ಮದ್ಯಕ್ಕೆ ಧ್ರಾವಕವನ್ನು ಮಿಶ್ರಣ ಮಾಡುತ್ತಿದ್ದಾರೆ ಎನ್ನುವ ದೂರು ಸರ್ಕಾರಕ್ಕೆ ಬಂದಿದೆಯೆಂದು ಕೇಳಿದ್ದೇನೆ. ಆದುದರಿಂದ, ಮದ್ಯಕ್ಕೆ ದ್ರಾವಣ ಬೆರಸಿ ಮಾರುವುದನ್ನು ತಪ್ಪಿಸುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಇದರ ಜೊತೆಗೆ, ಮದ್ಯಪಾನವನ್ನು ತಪ್ಪಿಸಿದರೆ ಇನ್ನೂ ಕ್ಷೇಮ.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರು ಹೇಳುವುದರಲ್ಲಿ ನಿಜಾಂಶವಿದೆ. ಇದೊಂದು ತಾತ್ವಿಕ ಪ್ರಶ್ನೆಯಾಗಿರುವುದರಿಂದ, ಇದರ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಮರಗಳಿಂದ ಮದ್ಯ ಇಳಿಸುವ ಪದ್ಧತಿ ಈಗ ಇದೆ. ಕಾಲಾನುಕ್ರಮದಲ್ಲಿ ಮರಗಳು ಕಡಿಮೆಯಾಗುತ್ತಾ ಇದೆ. ನಾವು ಹೆಚ್ಚು ಆದಾಯ ಬರುವುದರ ಕಡೆ ನೋಡುತ್ತಿದ್ದೇವೆ. ಟಾಡಿ ಕಂಟ್ರಾಕ್ಟು ದಾರರು ಇತ್ತೀಚೆಗೆ ಕೆಲವು ದ್ರಾವಕಗಳನ್ನು ತಾವು ತಯಾರಿಸುವ ಮದ್ಯದ ಜೊತೆಗೆ ಬೆರಸುತ್ತಿದ್ದಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ತಡೆಗಟ್ಟಲು, ಟಾಡಿಯನ್ನೇ ನಿಲ್ಲಿಸುವುದು ಉತ್ತಮವಾದ ಮಾರ್ಗ. ಟಾಡಿಯನ್ನು ನಿಲ್ಲಿಸಬೇಕು ಮತ್ತು ಬೀರು ಮುಂತಾದವುಗಳನ್ನು ಹೆಚ್ಚಿಗೆ ತಯಾರಿಸುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಎ. ಜಿ. ಕೊಡಗಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೇಂದಿಯನ್ನು ಮರಗಳಿಂದ ತೆಗೆಯುತ್ತಿದ್ದಾರೆ: ಅಲ್ಲಿ ಮರಗಳ ಮೇಲೂ ತೆರಿಗೆಯನ್ನು ಹಾಕಿದ್ದಾರೆ. ಇದರಿಂದಾಗಿ, ಈ ಕಸಬನ್ನು ಆಶ್ರಯಿಸಿರುವವರು ಬಹಳ ಬಡವರಾಗುತ್ತಿದ್ದಾರೆ. ಮತ್ತು ಅವರೆಲ್ಲರೂ, ಸರ್ಕಾರದ ವತಿಂದೆ ಅನೇಕ ಸಂದರ್ಭಗಳಲ್ಲಿ ಮರಗಳ ಮೇಲೆ ಹಾಕಿರುವ ತೆರಿಗೆಯನ್ನು ತೆಗೆಯಬೇಕೆಂದು ತಮ್ಮ ಕೋರಿಕೆಯನ್ನು ಮಂಡಿಸಿದ್ದಾರೆ. ಆದುದರಿಂದ, ತಾವು ಈ ಮರಗಳ ಮೇಲಿನ ತೆರಿಗೆಯನ್ನು ತೆಗೆಯಲಕ್ಕೆ ಆದೇಶ ಕೊಡುತ್ತೀರಾ

ಶ್ರೀಮತಿ ಇ. ಇ. ವಾಜ್.—ತೇಂದಿ ತಯಾರಿಸುವವರಿಗೆ ಸ್ವಲ್ಪ ರಿಯಾಯಿತಿ ತೋರಿಸಬೇಕೆಂದು ನಿರ್ಧಾರ ಮಾಡಿದ್ದೇವೆ. In the case of those who are tapping toddy for sale of toddy, the matter is under consideration.

Cost of Utility and other Buildings.

150. SRI T. R. SHAMANNA (Fort).—Will the Minister for Municipal Administration and Political Pensions be pleased to state:—

(*a*) the original estimated cost of—

(1) Utility building near Mayo Hall,

(2) Market Complex at Jayanagar,

3) Jayanagar Corporation Hospital, taken up by Bangalore City Corporation;

(*b*) the revised estimate of the above buildings;

(*c*) the rent expected to be realised from

(1) Utility building and
(2) Jayanagar Market Complex?

SRI D. K. NAIKAR (Minister for Municipal Administration and Political Pensions).—

(*a*) (1) Rs, 1,06,11,000
(2) Rs. 167 lakhs.
(3) Rs. 48,00,000

(*b*) (1) Utility building near Mayo Hall-Rs. 2,25,00,000
(2) Market Complex at Jayanagar—Rs. 2,54.00,000
(3) Jayanagar Corporation Hospital-Rs. 1,40,95,000

(*c*) (1) Rs. 34 lakhs per year.
(2) Rs. 38 13 lakhs per year

ಶ್ರೀ ಟಿ. ಆರ್ ಶಾಮಣ್ಣ.—ಬೆಂಗಳೂರು ನಗರ ಸಭೆಯವರು ಕಟ್ಟಿಸುತ್ತಾ ಇರುವ ಮೂರು ಮುಖ್ಯ ಕಟ್ಟಡಗಳಿಗೆ ಮೊದಲು ಅಂದಾಜು ಆದ ಪೆಚ್ಚಕ್ಕಿಂತಲೂ ಈಗ ಎರಡರಷ್ಟು ಮೂರರಷ್ಟು ಖರ್ಚಾಗಿರುವುದು ಎತಕ್ಕೆ ಎಂದು ತಿಳಿಸಲಾಗುತ್ತದೆಯೇ

†ಶ್ರೀ ಡಿ ಕೆ. ನಾಯ್ಕರ್.—ತಿಳಿಸಲಾಗುತ್ತದೆ. ಕಂಟ್ರಾಕ್ಟುದಾರರೊಂದಿಗೆ ಅಗ್ರೀಮೆಂಟ್ ಮಾಡಿಕೊಂಡಾಗ. ಸಿಮೆಂಟ್ ದರದಲ್ಲಾಗುವ ಎಸ್ಕಲೇಷನ್ ಏನಿದೆ. ಅದರ ಪ್ರಕಾರ ಕೊಡುವಂತೆ ಅಗಲೇ ಅಗ್ರಿಮೆಂಟ್ ಆಗಿತ್ತು. ಆ ಪ್ರಕಾರವಾಗಿ, ಮುಂದೆ ಕಟ್ಟಡವನ್ನು ಕಟ್ಟುತ್ತಾ ಬಂದಾಗ ಸಿಮೆಂಟ್ ಮತ್ತು ಕಬ್ಬಿಣದ ದರದಲ್ಲಿ ಏನು ಎಸ್ಕಲೇಷನ್ ಆಯಿತು ಅದನ್ನು ಕೊಡುವುದಕ್ಕೆ 16 ಲಕ್ಷ ರೂಪಾಯಿಗಳಾಗಿವೆ. ಇದರ ಜೊತೆಗೆ, ಲಿಫ್ಟ್, ಪಾಟರ್ ಸಪ್ಲೈ, ಎಲೆಕ್ಟ್ರಿಕ್, ಏರ್ ಕಂಡೀಷನ್ ಇನ್ ಆಡಿಟೋರಿಯಂ, ಕಾನ್ಫರೆನ್ಸ್ ಹಾಲ್, ಲಿಫ್ಟ್ ಮೇನ್‌ಟೆನೆನ್ಸ್ ರೂಂ-ಮುಂತಾಗಿ ಹೊಸ ಹೊಸದಾಗಿ ಕೆಲಸಗಳನ್ನು ತೆಗೆದುಕೊಂಡಿದ್ದರಿಂದ, ಮೊದಲು ಅಂದಾಜು ಆಗಿದ್ದಕ್ಕಿಂತಲೂ ಹೆಚ್ಚಿಗೆ ಖರ್ಚು ಮಾಡಬೇಕಾಗಿ ಬಂತು.

ಶ್ರೀ ಟಿ. ಆರ್. ಶಾಮಣ್ಣ.—ಜಯನಗರ ಮಾರುಕಟ್ಟೆ ಮತ್ತು ಯುಟಿಲಿಟಿ ಮಾರುಕಟ್ಟೆಯಲ್ಲಿ ಸುಮಾರು ಕಳೆದ ಆರು ತಿಂಗಳುಗಳಿಂದಲೂ ಬಾಡಿಗೆದಾರರು ಬಾಡಿಗೆ ಕೊಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದರೆ ಅದನ್ನು ವಸೂಲು ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ

ಶ್ರೀ ಡಿ. ಕೆ. ನಾಯ್ಕರ್.—ಇದು ನನ್ನ ನಜರಿಗೆ ಬಂದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಅಂದಾಜು ಆಗಿರುವುದಕ್ಕಿಂತಲೂ ಹೆಚ್ಚು ಖರ್ಚು ಮಾಡಿರಾದ ಹಣದಲ್ಲಿ, ಕಂಟ್ರಾಕ್ಟುದಾರರಿಗೆ ಕೊಟ್ಟ ಹಣವೆಷ್ಟು ಮತ್ತು ಹೊಸ ಹೊಸ ಕೆಲಸಗಳಿಗೆ ಆದ ಖರ್ಚು ಎಷ್ಟು?

ಶ್ರೀ ಡಿ ಕೆ. ನಾಯ್ಕರ್ —ಯುಟಿಲಿಟಿ ಕಟ್ಟಡಕ್ಕೆ ಸಂಬಂಧಪಟ್ಟಿ ಹಾಗೆ excess as per tender — 51,45,000.

Extra item	...	22,27,000
Architect's fees	...	6,00,000
Auditorium seats and interior decoration	...	5,73,000

Difference in cost of steel and cement	...	11,00,000
Miscellaneous items like work-charged establishment, advertisement and other charges	...	8,00,000
Excess due to execution of certain items found necessary during execution like circular staircase, etc.	...	8,00,000

ಈ ರೀತಿ ಇದೆ.

ಶ್ರೀ ಎಚ್. ಎನ್. ನಂಜೇಗೌಡ.—ಯಿಟಿಲಿಟಿ ಬಿಲ್ಡಿಂಗ್‌ಗೆ 1,06,00,000 ರೂಪಾಯಿಗಳ ಅಂದಾಜಾಗಿತ್ತು. ಮುಂದೆ ಸಿಮೆಂಟ್ ಎಸ್ಕ್ಯಲೇಷನ್ ಸೇರಿ 67 ಲಕ್ಷ ರೂಪಾಯಿಗಳನ್ನು ಕೊಡ ಲಾಗಿದೆ. ಅಂದರೆ ಹಾಕಿರುವ ಟೆಂಡರ್ ಮೇಲೆ ಶೇಕಡ 50 ರಷ್ಟು ಭಾಗ ಕಂಟ್ರಾಕ್ಟುದಾರರಿಗೆ ಹೆಚ್ಚಿಗೆ ಹಣವನ್ನು ಕೊಟ್ಟ ಹಾಗಾಯಿತು. ಹೀಗೆ ಕೊಡಲು ಇದ್ದ ಪ್ರಬಲವಾದ ಕಾರಣಗಳೇನು ಇದು ಕ್ಲೈಮ್ಸ್ ಕಮಿಟಿ ಮುಂದೆ ಬಂದಿತ್ತೆ, ಆಥವಾ ಕಾರ್ಪೊರೇಷನ್ ಮುಂದೆ ಬಂದಿತ್ತೆ, ಅಥವಾ ಸರ್ಕಾರದ ಮುಂದೆ ಬಂದಿತ್ತೆ. ಶೇಕಡ 50ರಷ್ಟು ಹಣವನ್ನು ಟೆಂಡರ್‌ನಲ್ಲಿ ನಮೂದು ಮಾಡಿದುದ ಕ್ಕಿಂತಲೂ ಹೆಚ್ಚಿಗೆ ಕೊಡಬೇಕಾದರೆ, ಅದು ಕ್ಲೈಮ್ಸ್ ಕಮಿಟಿಯ ಮುಖಾಂತರ, ಸರ್ಕಾರದ ಮುಂದೆ ಬರಬೇಕು ಆದುದರಿಂದ, ಇದು ಯಾವ ಹಂತದಲ್ಲಿ ಬಂತು ಮತ್ತು ಯಾರು ಇದಕ್ಕೆ ಅಪ್ಪಣೆ ಕೊಟ್ಟರು ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವೆ?

ಶ್ರೀ ಡಿ. ಕೆ. ನಾಯ್ಕರ್.—ಈ ರಕಂನ್ನು ಕೊಡುವಾಗ, ಸರ್ಕಾರ ಸರ್ವ ರೀತಿಯ ಕಾಳಜಿ ವಹಿಸಿದೆ. ಈ ಹಣವನ್ನು ಕಾರ್ಪೊರೇಷನ್ ಹಂತದಲ್ಲಿ ಕೊಟ್ಟಿಲ್ಲ. ಸರ್ಕಾರದವರು ಸ್ವತಃ ಸೆಕ್ರಟರಿ ಯೇಟ್ ಲೆವಲ್‌ನಲ್ಲಿ, ಕಾರ್ಪೊರೇಷನ್, ಲೋಕೋಪಯೋಗಿ ಇಲಾಖೆ, ಹಣಕಾಸು ಇಲಾಖೆಯ ಕಾರ್ಯದರ್ಶಿಗಳು ಮತ್ತಿತರ ತಜ್ಞರು ಒಪ್ಪಿ, ಚರ್ಚೆ ಮಾಡಿ, ಅವರ ಅಭಿಪ್ರಾಯದ ಮೇರೆಗೆ ಪ್ರೊಸೀಡಿಂಗ್ಸ್ ಮಾಡಿ ಕೊಟ್ಟಿದೆ. ಬೇರೆ ಯಾವ ಹಂತದಲ್ಲೂ ಕೊಟ್ಟಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ,—ಅಂದಾಜು ವೆಚ್ಚದ 50ರಷ್ಟು ಭಾಗದ ಹಣವನ್ನು ಕಂಟ್ರಾಕ್ಟುದಾರರಿಗೆ ಹೆಚ್ಚಿಗೆ ಕೊಡುವ ವಿಚಾರ ನನಗೆ ಒಂದು ದೊಡ್ಡ ವ್ಯವಹಾರವಾಗಿ ಕಾಣುತ್ತಿದೆ. ಇದರಿಂದ ನನಗೆ ಅನಕ್ಕೆ ಹೆಚ್ಚಾಗಿದೆ ಆದುದರಿಂದ, ಇದಕ್ಕೆ ಸಂಬಂಧಪಟ್ಟ ವಿಚಾರವದು. ಮಾನ್ಯ ಮಂತ್ರಿಗಳು ಸಭೆಯ ಮುಂದೆ ಇಟ್ಟರೆ ಬಹಳ ಒಳ್ಳೆಯದು,

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರು ಪ್ರೊಸೀಡಿಂಗ್ಸ್‌ನ್ನು ನೋಡಬೇಕಾದರೆ, ಪ್ರತ್ಯೇಕವಾಗಿ ಬರಲಿ ಅವರಿಗೆ ಸಂಬಂಧಪಟ್ಟ ಫೈಲನ್ನೇ ಕೊಟ್ಟುಬಿಡುತ್ತೇನೆ. ನೋಡಿಕೊಳ್ಳಲಿ.

ಶ್ರೀ ಎಂ. ಎಸ್. ಕೃಷ್ಣನ್.—ಸಿಮೆಂಟ್ ಮತ್ತು ಸ್ಟೀಲ್ ಪ್ರೈಸ್ ಜಾಸ್ತಿಯಾಗಿರುವುದ ರಿಂದ ಕಾಸ್ಟ್ ಆಫ್ ದಿ ಬಿಲ್ಡಿಂಗ್ ಜಾಸ್ತಿಯಾಗಿದೆ ಎಂದು ಹೇಳಿದಿರಿ. ಇದರ ಒಂದು ಪರ್ಸೆಂಟೇಜ್ ನೋಡಿದರೆ ಬಹಳ ಅಗಾಧವಾಗಿ ಕಾಣುತ್ತದೆ. ತಾವು ಈಗ ಮಾಡಿರುವ ತೀರ್ಮಾನಕ್ಕಿಂತ ಮುಂದೆ ಎಸ್ಕಲೇಷನ್ ಪ್ರೈಸಸ್ ಇದರಲ್ಲಿ ಸೇರಿಕೊಂಡಿರುವುದಿಲ್ಲ. ಆದ್ದರಿಂದ ಜಾಸ್ತಿ ಪ್ರೈಸ್ ಅನ್ನು ಯಾವ ಆಧಾರದ ಮೇಲೆ ಕೊಡುವುದಕ್ಕೆ ತೀರ್ಮಾನ ಮಾಡಿದ್ದೀರಿ ?

1-30 ಪಿ. ಎಂ.

ಶ್ರೀ ಡಿ. ಕೆ. ನಾಯ್ಕರ್.—ನಾನು ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಮೊದಲೇ ಹೇಳಿದೆ, 1970ನೇ ಇಸವಿಯಲ್ಲಿ ಇದಕ್ಕೆ ಟೆಂಡರ್ ಆಗಿದ್ದು, ಅಗ್ರಿಮೆಂಟ್ ಪ್ರಕಾರ ಜಾಸ್ತಿ ರೇಟ್ ಕೊಡಬೇಕು ಎಂದು ಕಂಡಿಷನ್ ಅದರಲ್ಲಿ ಹಾಕಿದ್ದರು. ನಾವು ಸಂಪೂರ್ಣವಾಗಿ ಈ ವಿಷಯವನ್ನು ಪರಿಶೀಲನೆ ಮಾಡಿ, ಸರ್ಕಾರದ ಲೆವೆಲ್‌ನಲ್ಲಿ ತೀರ್ಮಾನ ಮಾಡಿದ್ದೇವೆ.

ಶ್ರೀ ಎಂ. ಎಸ್ ಕೃಷ್ಣನ್.—ಇಲ್ಲಿ ಬಂದಿರುವ ವಿಷಯ ಇಷ್ಟೆ. ಜಾಸ್ತಿ ಕೊಟ್ಟಿರತಕ್ಕ ಎಸ್ಕಲೇಷನ್ ಪ್ರೈಸಸ್ ಪರ್ಸೆಂಟೇಜ್ ಬಹಳ ಜಾಸ್ತಿಯಾಗಿ ಕಾಣುತ್ತದೆ. ಯಾವುದೇ ಅಗ್ರಿಮೆಂಟನ್ನು ಮಾಡಿಕೊಂಡರೂ ನಹ ಇದು ಮಾತ್ರ ಸಿಕ್ಕಾಪಟ್ಟೆ ಜಾಸ್ತಿಯಾಗಿ ಕೊಟ್ಟ ಹಾಗೆ ಕಾಣುತ್ತದೆ. ಇದರಲ್ಲಿ ಯಾವ ನ್ಯಾಯ ಇದೆ ?

ಶ್ರೀ ಡಿ. ಕೆ. ನಾಯ್ಕರ್.—ಅಗ್ರಿಮೆಂಟ್ ಅನ್ನು ಆಧಾರವಾಗಿಟ್ಟುಕೊಂಡು ಪರಿಣತರ ಅಭಿಪ್ರಾಯ ತಗೆದುಕೊಂಡು ಕೊಟ್ಟಿದ್ದೇವೆ.

ಶ್ರೀ ಸಿ. ಬೈರೇಗೌಡ.—ಈ ಮೂರು ಬಿಲ್ಡಿಂಗ್‌ಗಳಲ್ಲಿ ಒಂದನ್ನೇ ಬಿಲ್ಡಿಂಗ್‌ಗೆ ಎರಡು ಸಾರಿ ರೀಟೆಂಡರ್ ಕರೆದಿದ್ದಾರೆ. ಇದರಿಂದ ಕಾಸ್ಟ್ ಜಾಸ್ತಿಯಾಗಿದೆ. ಹಿಂದೆ ಇದ್ದಂಥ ಕಂಟ್ರಾಕ್ಟರ್ ಕೆಲಸ ಮಾಡದೆ ಇರುವುದಕ್ಕೆ ಕೊಟ್ಟ ಪೆನಾಲ್ಟಿ ಏನು ? ಮತ್ತೆ ಈ ಕಟ್ಟಡಗಳಿಂದ ಸುಮಾರು 38 ಲಕ್ಷ ರೂಪಾಯಿಗಳ ಬಾಡಿಗೆ ಬರುತ್ತದೆ ಬಾಡಿಗೆ ಕೊಡುವಾಗ ತಾವು ಯಾವ ನೀತಿಯನ್ನು ಅನುಸರಿಸಿ ಬಾಡಿಗೆಗೆ ಕೊಟ್ಟಿದ್ದೀರಿ ?

ಶ್ರೀ ಡಿ. ಕೆ. ನಾಯ್ಕರ್.—ಇದನ್ನೆಲ್ಲಾ ಟೆಂಡರ್ ಕರೆದು ಬಾಡಿಗೆ ಕೊಟ್ಟಿದ್ದೇವೆ.

ಶ್ರೀ ಸಿ. ಬೈರೇಗೌಡ —ಈ ರೀತಿಯಾಗಿ ರೀ ಟೆಂಡರ್ ಕರೆಯುವುದಕ್ಕೆ ಕಾರಣ ಏನು ? ಹಿಂದಿನ ಕಂಟ್ರಾಕ್ಟರಿಗೆ ಏನಾದರೂ ಪೆನಾಲ್ಟಿ ಹಾಕಿದ್ದೀರಾ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್ — ಜಯನಗರದ ಬಿಲ್ಡಿಂಗ್‌ನ್ನು ಹಿಂದೆ ಒಬ್ಬ ಕಂಟ್ರಾಕ್ಟರ್‌ಗೆ ಕೊಟ್ಟಿದ್ದು ಆದಕ್ಕೆ 1969ರಲ್ಲಿ ಎಸ್ಟಿಮೇಟ್ ವಗೈರೆ ಅಪ್ರೂವ್ ಆಗಿ ಈ ಕೆಲಸವನ್ನು ನಾವು ಕೊಟ್ಟಿಂಥಾದ್ದು. ಆದರೆ ಆ ಕಂಟ್ರಾಕ್ಟರ್ ಕೆಲಸ ಮಾಡಲಿಲ್ಲ. ಇದರಿಂದ ಕಂಟ್ರಾಕ್ಟರಿಗೂ ಮತ್ತು ಕಾರ್ಪೊರೇಷನ್‌ಗೂ ನ್ಯಾಯ ಬಂದಿದ್ದು, ಈ ಮಧ್ಯದಲ್ಲಿ ಸರ್ಕಾರ ಪ್ರವೇಶ ಮಾಡಿ ಕಂಟ್ರಾಕ್ಟರ್ ಅನ್ನು ಟರ್ಮಿನೇಟ್ ಮಾಡಿ ಹೊಸದಾಗಿ ಟೆಂಡರ್ ಕರೆದಾಗ, ಒಂದು ತೀರ್ಮಾನ ಮಾಡಿ ಬೇರೆ ಕಂಟ್ರಾಕ್ಟರಿಗೆ ಕೆಲಸ ಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಟೆಂಡರ್ ಕರೆದು ಅಗ್ರಿಮೆಂಟ್ ಮಾಡಿಕೊಂಡು ಈ ಕೆಲಸವನ್ನು ಕಂಟ್ರಾಕ್ಟರಿಗೆ ಕೊಟ್ಟಿದ್ದೇವೆಂದು ಹೇಳಿದಿರಿ. ಅಗ್ರಿಮೆಂಟ್ ಪ್ರಕಾರ ಟೆಂಡರ್ ಕ್ವಾಂಟಿಟಿ ಪೂರ್ಣವಾಗಿ ಜಾಸ್ತಿಯಾಗಿದೆ. ಈಗ ಅವರಿಗೆ ಎಷ್ಟು ಪರ್ಸೆಂಟ್ ಜಾಸ್ತಿ ರೇಟನ್ನು ಕೊಟ್ಟಿದ್ದೀರಿ, ಇವರಿಗಾಗಿ ಯಾವ ಒಂದು ರೇಟನ್ನು ಸರ್ಕಾರದವರು ಒಪ್ಪರಾಗಿದೆ, ನಿಮ್ಮ ಒಂದು ಅಗ್ರಿಮೆಂಟ್‌ನಲ್ಲಿ ಯಾವ ಒಂದು ಪರತ್ತನ್ನು ಅಳವಡಿಸಿಕೊಂಡಿದ್ದೀರಿ ?

ಶ್ರೀ ಡಿ. ಕೆ. ನಾಯ್ಕರ್.—ನಾನು ಮೊದಲೇ ಹೇಳಿದ ಪ್ರಕಾರ ಮೊದಲನೆಯ ಕಂಟ್ರಾಕ್ಟರನ್ನು ಟರ್ಮಿನೇಟ್ ಮಾಡಿದ್ದೇವೆ. ಅವನಿಂದ ಯಾವ ರೀತಿಯಾಗಿ ಹಣವನ್ನು ವಸೂಲು ಮಾಡಬೇಕು ಎನ್ನುವುದು ಪ್ರತ್ಯೇಕವಾದ ವಿಷಯ ಅವನು ನನ್ನದು ಏನೂ ತಪ್ಪು ಇಲ್ಲ ಎಂದು ವಾದ ಮಾಡಿದ್ದಾನೆ, ವಕೀಲರನ್ನೂ ಕೂಡ ಇಟ್ಟು ಇದರ ಬಗ್ಗೆ ವಾದ ನಡೆಸಿದ್ದಾನೆ. ಈ ವಿಷಯ ಹೈ ಕೋರ್ಟಿಗೆ ಹೋಗಿ, ಅಲ್ಲಿ ನಿಖರಾಲಯಾಗಿದ್ದು ಏನಾಗಿದೆ ಎನ್ನುವುದನ್ನು ನಾನು ಇನ್ನೂ ತಿಳಿದುಕೊಂಡಿಲ್ಲ.

ಶ್ರೀ ಸಿ ಬೈರೇಗೌಡ.—ಮೊದಲನೆಯ ಕಂಟ್ರಾಕ್ಟರಿಗೆ ಏನು ಪೆನಾಲ್ಟಿ ಎನ್ನುವುದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ಡಿ. ಕೆ. ನಾಯ್ಕರ್.—ಈ ಸದನದಲ್ಲಿ ಜಯನಗರದ ಕಾಂಪ್ಲೆಕ್ಸ್ ಬಗ್ಗೆ ಚರ್ಚೆ ಮಾಡಲಾಗಿದೆ. ಸರ್ಕಾರವೇ ಅದನ್ನು ಏಕೆ ತೆಗೆದುಕೊಳ್ಳಬಾರದು ಎಂದು ಇದೇ ಸದನದಲ್ಲಿ ಅನೇಕ ಜನ ಸ್ನೇಹಿತರು ಕೇಳಿದ್ದಾರೆ. ಅದಕ್ಕೂ ಕ್ಲಿಸ್ಕರ ಇದನ್ನು ನಾವು ತ್ವರಿತ ಗತಿಯಲ್ಲಿ ನಡೆಸಬೇಕು ಎಂದು ಈ ಮ್ಯಾಟರನ್ನು ಕಂಪ್ಲೀಟ್ ಆಗಿ ಸರ್ಕಾರದವರೇ ಪರಿಶೀಲನೆ ಮಾಡಿ ಮೊದಲನ ಕಂಟ್ರಾಕ್ಟರು ಈ ಕೆಲಸ ಮಾಡಲಕ್ಕೆ ಯೋಗ್ಯರಲ್ಲ ಎಂದು ಕಂಡುಹಿಡಿದು ಹೊಸ ಟೆಂಡರ್ ಕರೆದು ಅವರಿಗೆ ಹೊಸದಾಗಿ ಕೆಲಸವನ್ನು ಕೊಟ್ಟಿದ್ದೇವೆ.

ಶ್ರೀ ಟಿ ಆರ್. ಶಾಮಣ್ಣ —ಮಲ್ಟಿಸ್ಟೋರೇಜ್ ಬಿಲ್ಡಿಂಗ್ ಮತ್ತು ಮಾರ್ಕೆಟ್ ಕಾಂಪ್ಲೆಕ್ಸ್, ಡಿಬೆಂಚರ್ ಮುಖಾಂತರ ಸಾಲ ಎತ್ತಿ ಕಟ್ಟಿರತಕ್ಕ ಕಟ್ಟಡಗಳು. ಸಾಲ ತೆಗೆದುಕೊಂಡಾಗ ಇದ್ದಂಥ ಬೆಲೆಗೂ ಈಗಿನ ಬೆಲೆ ಡಬಲ್ ಆಗಿದೆ ಇದರಲ್ಲಿ ಏನು ಅವ್ಯವಹಾರ ಆಗಿದೆ, ಏನು ನಷ್ಟವಾಗಿದೆ ಎನ್ನುವುದರ ಬಗ್ಗೆ ಪರಿಶೀಲನೆ ಮಾಡಿ ಹಾಕಿರತಕ್ಕ ಬಾಡಿಗೆ ಹೆಚ್ಚಾಗಿದೆಯೇ ಅಥವಾ ಕಡಿಮೆಯಾಗಿದೆಯೇ ಎನುವುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್. -- ಇದರಲ್ಲಿ ಯಾವ ರೀತಿಯ ಸಂಶಯಕ್ಕೆ ಆಸ್ಪದವಿಲ್ಲದಂಥ ರೀತಿ ಸರ್ಕಾರದ ಹಂತದಲ್ಲಿಯೇ ಇದನ್ನು ನಾವು ತೀರ್ಮಾನ ಮಾಡಿದ್ದೇವೆ ಹಣಕಾಸಿನ ಇಲಾಖೆ ಕಾರ್ಯದರ್ಶಿ, ಕಾಮಗಾರಿ ಇಲಾಖೆಯ ಮುಖ್ಯ ಇಂಜಿನಿಯರ್ ಮತ್ತು ಕಾರ್ಪೊರೇಷನ್ ಇಂಜಿನಿಯರುಗಳು ಮಂತ್ರಿಗಳೂ ಇದರಲ್ಲಿ ಇದ್ದಾರೆ. ಆದ್ದರಿಂದ ಮಾನ್ಯ ಸದಸ್ಯರುಗಳಿಗೆ ಯಾವ ರೀತಿಯ ಸಂಶಯ ಮಾಡಲಿಕ್ಕೆ ಆಸ್ಪದ ಇಲ್ಲ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಗ್ರಿಮೆಂಟ್ ಕಾಪಿಯನ್ನು ಸದನದ ಟೇಬಲ್ ಮೇಲೆ ಇಡುತ್ತೀರಾ ?

ಶ್ರೀ ಎಂ ಎಸ್. ಕೃಷ್ಣನ್.—ಮಾನ್ಯ ನಂಜೇಗೌಡರಿಗೆ ಅವರು ಕೇಳಿದ್ದಕ್ಕೆ ಪರ್ಸನರ್ ಆಗಿ ಫೈಲನ್ನು ತೋರಿಸುತ್ತೇನೆಂದು ಹೇಳಿದಿರಿ, ಓಪನ್ ಆಗಿ ಆ ರಿಕಾರ್ಡನ್ನು ಸಭೆಯ ಮುಂದೆ ಇಟ್ಟರೆ ಎಲ್ಲರೂ ನೋಡಬಹುದಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ.—ನಿಮ್ಮ ಟರ್ಮ್ಸ್ ಆಫ್ ಅಗ್ರಿಮೆಂಟ್ ಪ್ರಕಾರ ಟೆಂಡರ್ ಕ್ವಾಂಟಿಟಿಗಿಂತ ಎಷ್ಟು ಪರ್ಸೆಂಟ್ ಜಾಸ್ತಿ ರೇಟನ್ನು ಕೊಟ್ಟಿದ್ದೀರಿ ? ಯಾವ ರೇಟನ್ನು ಕೊಡ ಬೇಕು ಎಂದು ಅಗ್ರಿಮೆಂಟಿನಲ್ಲಿದೆ ? ನೀವು ಕೊಟ್ಟಿರತಕ್ಕ ರೇಟನ್ನು ಅಗ್ರಿಮೆಂಟಿನಲ್ಲಿ ಇನ್‌ಕಾರ್ಪೊರೇಟ್ ಆಗಿದೆಯೇ ? ಇಲ್ಲದೇ ಹೋದರೆ ಯಾವ ಆಧಾರದ ಮೇಲೆ ನೀವು ಅವರಿಗೆ ಹೆಚ್ಚಿಗೆ ಹಣವನ್ನು ಕೊಟ್ಟಿರಿ ?

SRI D. K. NAIKAR.—I ant notice so far as this question is concerned.

SRI KAGODU THIMMAPPA.—Let him place all the records along with the copy of the agreement. I want to know the basis on which they have given more rate.

ಶ್ರೀ ಡಿ. ಕೆ. ನಾಯ್ಕರ್—ಅಗ್ರಿಮೆಂಟ್ ನನ್ನಲ್ಲಿಲ್ಲ ಅದಕ್ಕೋಸ್ಕರ ನೋಟೀಸ್ ಬೇಕು ಎಂದು ಹೇಳಿದ್ದೇನೆ.

SRI KAGODU THIMMAPPA.—You must come with all the connected records and documents. More than Rs 50 lakhs bas been paid. Let him come with full answer. Otherwise let him place the connected records.

ಶ್ರೀ ಎಂ. ಎಸ್. ಕೃಷ್ಣನ್.—ನಾಳೆಯ ದಿವಸ ಮತ್ತೆ ಈ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು

SRI KAGODU THIMMAPPA.—Copy of the agreement is necessary.

SRI D. K NAIKAR.—I have given the complete answer I only requested the Chair to permit me to have notice so far as the production of agreement is concerned.

ಶ್ರೀ ಕಾಗೋಡು ತಿಮ್ಮಪ್ಪ.—ಅಗ್ರಿಮೆಂಟ್ ಪ್ರಕಾರ ಅವರಿಗೆ ಜಾಸ್ತಿಯಾದಂಥ ರೇಟನ್ನು ಕೊಟ್ಟಿದ್ದೇವೆಂದು ಹೇಳಿದರು, ಅಗ್ರಿಮೆಂಟಿನ ಯಾವ ಐಟಂನಲ್ಲಿ ಎಕ್ಸ್‌ಟ್ರಾ ರೇಟನ್ನು ಕೊಡಬೇಕೆಂದು ಇನ್‌ಕಾರ್ಪೊರೇಟ್ ಆಗಿದೆ ? You ought to bave come with all particulars after going through the details of the agreement. Agreement copy is quite essential.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಈ ಪ್ರಶ್ನೆಯನ್ನು ತಡೆಹಿಡಿಯಬಹುದು. ನಾಳೆ ಇದನ್ನು ನಾವು ತೆಗೆದುಕೊಳ್ಳಬಹುದಲ್ಲವೇ ?

ಶ್ರೀ ಡಿ. ಕೆ. ನಾಯ್ಕರ್.— ತಾವು ಕೇಳಿದ ಪ್ರಶ್ನೆ ಇದರ ಎಕ್ಸ್‌ಪೆಂಡೀಚರ್ ಬಗ್ಗೆ ಟರ್ಮ್ಸ್ ಆಫ್ ಅಗ್ರಿಮೆಂಟ್ ಎಕ್ಸೀಡ್ ಆಗಿದೆ ಎನ್ನುವುದು ಈ ಪ್ರಶ್ನೆಯಲ್ಲಲ್ಲ. ಅಗ್ರಿಮೆಂಟ್ ಕಾಪಿಯನ್ನು ಇಡತಕ್ಕ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಏಕೆಂದರೆ ಮಾನ್ಯ ಶಾಮಣ್ಣನವರ ಪ್ರಶ್ನೆ ಏನು ಇದೆ ಅದಕ್ಕೆ ಉತ್ತರ ಕೊಟ್ಟಿದ್ದಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಹೆಚ್ಚು ವಿವರಗಳು ಬೇಕಾದರೆ, ಮಾನ್ಯ ಮಂತ್ರಿಗಳು ಹೇಳುವುದಕ್ಕಾಗುವುದಿಲ್ಲವೇ ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ, ಅಗ್ರಿಮೆಂಟ್ ನನ್ನಲ್ಲಿಲ್ಲ. ಅಗ್ರಿಮೆಂಟ್ ಆಧಾರದ ಮೇಲೆ ಏನು ಪ್ರಶ್ನೆ ಕೇಳುತ್ತಿದ್ದಾರೋ ಅದಕ್ಕೆ ನೋಟೀಸ್ ಬೇಕು ಎಂದು ಕೇಳಿಕೊಂಡಿದ್ದೇನೆ

ಅಧ್ಯಕ್ಷರು —ಅಗ್ರಿಮೆಂಟ್ ಅನ್ನು ಟೇಬಲ್ ಮೇಲೆ ಇಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಈಗಿಲ್ಲ, ಇಲ್ಲದಿದ್ದರೆ ಇಟ್ಟುಬಿಡುತ್ತಿದ್ದೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾಳೆ ಬೆಳಿಗ್ಗೆ ಆ ಅಗ್ರಿಮೆಂಟ್‌ನ್ನು ತಂದು ಇಡುತ್ತೀರಾ ಸ್ವಾಮಿ ?

ಶ್ರೀ ಡಿ. ಕೆ. ನಾಯ್ಕರ್.—ನಾನು ನಾಳೆ ಬೆಳಿಗ್ಗೆ ಅಗ್ರಿಮೆಂಟ್ ಅನ್ನು ತಂದು ಇಡುತ್ತೇನೆ ಅಂತ ಹೇಳಲಿಲ್ಲಾ. ತಾವು ಆ ಅಗ್ರಿಮೆಂಟ್ ಅನ್ನು ತಂದು ಇಡುತ್ತೀರಾ ಅಂತ ಕೇಳಿದ್ದಕ್ಕೆ ತಂದು ಇಡುತ್ತೇನೆ ಅಂತ ಅಷ್ಟು ಮಾತ್ರ ಹೇಳಿದೆ. ಅದಕ್ಕೆ ಸ್ವಲ್ಪ ಕಾಲ ಬೇಕಾಗುತ್ತದೆ ಎಂದು ತಮ್ಮನ್ನು ಕೇಳಿದ್ದೇನೆ.

ಶ್ರೀ ಎಂ ಎಸ್. ಕೃಷ್ಣನ್.—ಯಾವಾಗ ತಂದು ಇಡುತ್ತೀರಿ ?

ಶ್ರೀ ಡಿ. ದೇವರಾಜ್ ಅರಸ್ —ಅವರು ಇಡುತ್ತೇವೆ ಅಂದ ಮೇಲೆ ಇಡುತ್ತಾರೆ 15 ದಿವಸ ಆಗುತ್ತದೋ ಒಂದು ತಿಂಗಳು ಆಗುತ್ತದೋ ಅಂತ ಕೇಳಿದರೆ ಅದಕ್ಕೆ ಏನು ಉತ್ತರ ಕೊಡುವುದು ಅದನ್ನು ರೀಸನಬಲ್ ಟೈಂನೊಳಗೆ ಇಡೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಸೆಷನ್ ಇರುವಾಗ ಅದನ್ನು ಇಡುತ್ತೀರಾ ?

ಶ್ರೀ ಡಿ ದೇವರಾಜ್ ಅರಸ್. —ಇಡೋಣ.

ಶ್ರೀ ಎಂ. ಎಸ್ ಕೃಷ್ಣನ್.—ಎಫಿಷಿಯೆನ್ಸಿ ತೋರಿಸಿಕೊಳ್ಳಬೇಕಾದರೆ ಬೇಗನೆ ಇಡಬೇಕು.

ಶ್ರೀ ಡಿ. ದೇವರಾಜ್ ಅರಸ್.—ಎಫಿಷಿಯೆನ್ಸಿ ತೋರಿಸಿಕೊಳ್ಳಬೇಕಾದರೆ ಮೊದಲು ಇಟ್ಟು ಬಿಟ್ಟು ಆಮೇಲೆ ತೋರಿಸಿಕೊಳ್ಳೋಣ.

ಶ್ರೀ ಟಿ. ಆರ್. ಶಾಮಣ್ಣ.—ಕಾರ್ಪೊರೇಷನ್ ಆಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ಅಸೆಂಬ್ಲಿಯಲ್ಲಿ ನಾವು ಕೇಳಿದ ಪ್ರಶ್ನೆಗಾದರೂ ತಾವು ಉತ್ತರ ಕೊಡಬೇಕು ಎಂದು ಅಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ —ಏನಾದರು ಇಡುತ್ತೇವೆ ಎಂದು ಆಗಲೇ ಉತ್ತರ ಕೊಟ್ಟಿದ್ದಾರಲ್ಲಾ ಈಗ ಏನಾಗಿದೆ ಒಂದರೆ ಮಳೆ ನಿಂತರೂ ಮಳೆ ಹನಿ ನೀರು ನಿಂತಿಲ್ಲ ಅಂದ ಹಾಗೆ ಇದೆ

ಶ್ರೀ ಹೆಚ್. ಎನ್. ನಂಜೇಗೌಡ.—ಈಗ ಈ 3 ಕೆಲಸಗಳಿಗೆ ಮಂತ್ರಿಗಳು ಹೇಳಿದ ಪ್ರಕಾರ 2 ಕೋಟಿ ರೂಪಾಯಿ ಎಕ್ಸ್‌ಟ್ರಾ ಎಕ್ಸ್‌ಪೆಂಡಿಚರ್ ಆಗಿದೆ. ಇದನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಾ ಎಂದು ನಾನು ಮೊದಲು ಕೇಳಿದ್ದೇನೆ, ನಾನು ಈವಾಗ ತಮ್ಮನ್ನು ಕೇಳುವುದು ಯಾವ ಆಧಾರದ ಮೇಲೆ ಜಾಸ್ತಿ ಹಣ ಕೊಟ್ಟಿದ್ದೀರೋ ಅವುಗಳೆಲ್ಲದರ ಆಧಾರ ಸಹಿತ ಇರುವ ದಾಖಲೆಗಳನ್ನು ಇಡುತ್ತೀರಾ ಅಥವಾ ಬರೀ ಅಗ್ರಿಮೆಂಟ್ ಇಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಅಗ್ರಿಮೆಂಟ್ ಇಡಬೇಕು ಎಂದು ಮಾನ್ಯ ಸದಸ್ಯರ ಬೇಡಿಕೆ ಇರುವುದರಿಂದ ಆ ಅಗ್ರಿಮೆಂಟ್‌ನ್ನು ಇಡುತ್ತೇನೆ. ಆ ಅಗ್ರಿಮೆಂಟ್ ನೋಡಿಕೊಂಡು ಪುನ: ಅವರು ಪ್ರಶ್ನೆ ಹಾಕಲಿ, ನಿಮಗೆ ಅದರ ಬಗ್ಗೆ ಕೇಳುವ ಅಧಿಕಾರ ಇದೆಯಲ್ಲಾ.

Dispute over Land Grant in Chamarajanagar Taluk

187. SRI K. SIDDIAH (Santhemarahally).—Will the Minister for Revenue be pleased to state :—

(*a*) whether it is a fact that certain extent of land in Honnarapalu, Chamarajanagar Taluk was sanctioned to the Harijans, Kegalvadi Village, Chamarajanagar Taluk ;

(*b*) whether it is a fact that the same land was sanctioned subsequently to the Harijans of Doddarayapet Village in the same Taluk to settle them in that colony;

(*c*) whether it is a fact that the grantees of the said land of both the Villagers represented to Government several times to settle their disputes regarding the title for the said land ;

(*d*) whether it is a fact that, as a result of failure to settle the dispute both the parties were compelled to resort to the court of law ;

(*e*) whether this fact was not noticed at the time of preparing the sketch and mahazar or at the time of putting the parties of each village in possession of the said land ;

(*f*) whether Government have made enquiries about this discrepency when it came to their notice ;

(*g*) if so, the action taken in that behalf ?

SRI N. HUTCHAMASTHY GOWDA (Minister for Revenue).—

(*a*) Yes.

(*b*) No. They have been granted lands in separate blocks.

(*c*) No.

(*d*) Certain disputes between the grantees in these villages are pending in the Munsiff's Court, Chamarajanagar.

(*e*) Does not arise in view of answers to (*b*).

(*f*) Does not arise in view of answers to (*b*)

(*g*) Does not arise in view of answers to (*b*).

ಶ್ರೀ ಕೆ. ಸಿದ್ಧಯ್ಯ.—ಇದರಲ್ಲಿ ಕಾಗಲವಾಡಿಗೇ ಬೇರೆ, ದೊಡ್ಡರಾಯಪೇಟೆಗೆ ಬೇರೆ ಪ್ರತ್ಯೇಕ ಮಾಡಿದ್ದೀರಿ. ಅವರುಗಳಿಗೆ ಈ ಜಮೀನುಗಳನ್ನು ಮುಂಜೂರು ಮಾಡುವಾಗ ಆ ಜಮೀನಿನ ಚೌಂಡರಿಯನ್ನು ನಿಗದಿ ಮಾಡಿ ಅವರಿಗೆ ಸ್ವಾಧೀನ ಕೊಟ್ಟಿದ್ದೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿ ನಡೆದಿರತಕ್ಕಂಥಾ ವಿದ್ಯಮಾನ ಹೀಗೆ ಇದೆ. 15ನೇ ಅಕ್ಟೋಬರ್ 1950ರಲ್ಲಿ ಅಸಿಸ್ಟೆಂಟ್ ಕಮೀಷನರ್ ಅವರ ಆರ್ಡರ್ ಪ್ರಕಾರ ಕಾಗಲವಾಡಿ ಗ್ರಾಮದ ಹರಿಜನರಿಗೆ 184 ಎಕರೆ ಜಮೀನನ್ನು ಒಬ್ಬೊಬ್ಬರಿಗೆ 4-4 ಎಕರೆ ಪ್ರಕಾರ 46 ಜನಕ್ಕೆ ಕೊಟ್ಟಿದೆ. ಆಮೇಲೆ ದೊಡ್ಡರಾಯಪೇಟೆ ಗ್ರಾಮದವರಿಗೆ 16ನೇ ಡಿಸೆಂಬರ್ 1955ರಲ್ಲಿ